44.	ಕಾರ್ಯಪಾಲಕ ಇಂಜಿನೀಯರ್, ಯೋಜನಾ ವಿಭಾಗ, ಚಿಕ್ಕಬಳ್ಳಾಪುರ	ರೂ. 4360.00
45.	ಪೋಲೀಸ್ ಇನ್ಸ್‌ಪೆಕ್ಟರ್, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಚಿಕ್ಕಬಳ್ಳಾಪುರ	ರೂ. 9750.00
46.	ಜಿಲ್ಲಾ ಖಜಾನಾಧಿಕಾರಿಗಳು, ಚಿಕ್ಕಬಳ್ಳಾಪುರ	ರೂ. 14800.00
47.	ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನೆ, ಚಿಕ್ಕಬಳ್ಳಾಪುರ	ರೂ. 8200.00
	ಒಟ್ಟು	ರೂ. **401151.00**

ಬೈರಮಂಗಲ ಕೆರೆ

581 (835) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ, ಮಾಗಡಿಯ ಬಿಡದಿ, ಹೋಬಳಿಯ ಬೈರಮಂಗಲ ಕೆರೆಯು ಬೆಂಗಳೂರಿನಿದ ಹರಿಯುವ ಕೊಚ್ಚೆ ನೀರಿನಿಂದ ತುಂಬಿಕೊಂಡು ಕಲುಷಿತಗೊಂಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯಾವಾಗಿನಿಂದ ಈ ಸಮಸ್ಯೆ ಇದೆ, ಕೆರೆಯ ಎಡ ಮತ್ತು ಬಲ ನಾಲೆಗಳಲ್ಲಿ ಹೂಳಿನಿಂದ ತುಂಬಿಕೊಂಡಿದ್ದು, ನೈರ್ಮಲ್ಯ ಹದಗೆಟ್ಟಿದ್ದು, ಇದರಿಂದ ಸಾಂಕ್ರಾಮಿಕ ರೋಗಕ್ಕೆ ಕಾರಣವಾಗುತ್ತಿದ್ದು, ಇದನ್ನು ತಡೆಗಟ್ಟಲು ಯಾವ ಯಾವ ಅವಧಿಯಲ್ಲಿ ಯಾವ ಯಾವ ಕ್ರಮ ತೆಗೆದು ಕೊಳ್ಳಲಾಗಿದೆ (ವಿವರ ನೀಡುವುದು);

ಇ) ಸುಮಾರು ವರ್ಷಗಳಿಂದ ಈ ಸಮಸ್ಯೆ ಉಲ್ಬಣಗೊಂಡು ಪರಿಸರ ನಾಶವಾಗುತ್ತಿರುವ ಬಗ್ಗೆ ಯಾವ ಯಾವ ಕ್ರಮಗಳ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಬಂದಿದೆ.

ಆ) ಸುಮಾರು 10–15 ವರ್ಷಗಳಿಂದ ಕೆರೆಯು ಕಲುಷಿತ ಗೊಂಡಿರುವುದು ಕಂಡುಬಂದಿದೆ. ಎಡ ಮತ್ತು ಬಲದಂಡೆ ನಾಲೆಗಳಲ್ಲಿ ಭಾಗಶಃ ಹೂಳು ತುಂಬಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಪ್ರತಿ ವರ್ಷ ಹೂಳನ್ನು ತೆಗೆಯಲಾಗುತ್ತಿದೆ. ಬೆಂಗಳೂರು ನಗರದ ಭಾಗಶಃ ಕೊಳಚೆ ನೀರು ಮತ್ತು ವೃಷಭಾವತಿ ದಡದಲ್ಲಿರುವ ಕಾರ್ಖಾನೆಗಳಿಂದಲೂ ತ್ಯಾಜ್ಯಗಳು ದ್ರವರೂಪದಲ್ಲಿ ನದಿ ನೀರಿಗೆ ಸೇರ್ಪಡೆಯಾಗಿ ಬೈರಮಂಗಲ ಕೆರೆಗೆ ಬರುತ್ತಿರುವುದರಿಂದ ಕೆರೆಯ ನೀರು ಕಲುಷಿತಗೊಂಡು ನೈರ್ಮಲ್ಯ ಹದಗೆಟ್ಟಿದೆ. ಇದನ್ನು ತಡೆಗಟ್ಟಲು ಕೆರೆ ಅಭಿವೃದ್ಧಿ ಪ್ರಾಧಿಕಾರವು ಮೆಗಾ ಸಿಟಿ ಪ್ರಾಜೆಕ್ಟ್ ಅಥವಾ ಎನ್.ಎಲ್.ಸಿ.ಪಿ. ಯೋಜನೆಯಡಿ ಖಾಸಗಿ ಸಹಭಾಗಿತ್ವ ದೊಂದಿಗೆ ಬಯೋರೇಮಿಡಿಯಲ್ ಪ್ರೊಸೆಸ್ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿದೆ.

ಇ) ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

ಅನುಬಂಧ – 1

ವಿಧಾನ ಸಭಾ ಸದಸ್ಯರಾದ ಶ್ರೀ ಬಾಲಕೃಷ್ಣ ಹೆಚ್.ಪಿ. (ಮಾಗಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ: 835 ಕ್ಕೆ ಟಿಪ್ಪಣಿ

ಬೈರಮಂಗಲ ಜಲಾಶಯಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯ ಭಾಗಶಃ ಹರಿದು ಬರುವ, ಕೊಳಚೆ ನೀರು ಹಾಗೂ ವೃಷಭಾವತಿ ನದಿ ದಡಗಳಲ್ಲಿರುವ ಕಾರ್ಖಾನೆಯ ತ್ಯಾಜ್ಯವು ದ್ರವ ರೂಪದಲ್ಲಿ ಶೇಖರಣೆಯಾಗಿ ನೀರು ಕಲುಷಿತಗೊಂಡಿರುತ್ತದೆ. ನೀರಿನ ಕಲುಷಿತ ಅಂಶಗಳನ್ನು ತಡೆಗಟ್ಟಿ ಶುದ್ಧೀಕರಿಸಲು ಈ ಜಲಾಶಯವನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಹಸ್ತಾಂತರಿಸಲಾಗಿದೆ.

ಸದರಿ ಜಲಾಶಯವು ಕಲುಷಿತಗೊಂಡಿರುವುದನ್ನು ಬಯೋ ರೆಮಿಡಿಯಲ್ ಪ್ರೊಸೆಸ್ ಯೋಜನೆ ಅಡಿಯಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರವು ಕೈಗೊಂಳ್ಳುತ್ತಿದೆ. ಈ ಯೋಜನೆಯಡಿ ಕೊಳಚೆ ನೀರನ್ನು ಎಸ್.ಟಿ.ಪಿ. ಘಟಕಗಳಲ್ಲಿ Pollution Control Board normsಗೆ ಅನುಗುಣವಾಗಿ

ಶುದ್ಧೀಕರಿಸಿ, ಕೆರೆಗೆ ನೀರನ್ನು ಬಿಡಲು BWSS & DB ಯವರು ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವುದಾಗಿ ತಿಳಿದು ಬಂದಿದೆ. ಕೆರೆಗ ಹರಿದು ಬರುವ ಕಳಚೆ ನೀರನ್ನು ಶುದ್ಧೀಕರಿಸಿ ಬೈಪಾಸ್ ಕಾಲುವೆ ಮೂಲಕ ಕೆರೆಯ down strean sideಗೆ ಹರಿಸುವುದರ ಮೂಲಕ ಕೆರೆಯ ನೈರ್ಮಲ್ಯವನ್ನು ಕಾಪಾಡಬಹುದಾಗಿದೆ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಬೈರಮಂಗಲ ಜಲಾಶಯದ ವ್ಯಾಪ್ತಿಯಲ್ಲಿ ವಿವಿಧ ಹಂತಗಳಲ್ಲಿ ನೀರಿನ ಗುಣ ಮಟ್ಟವನ್ನು ಪರೀಕ್ಷಿಸುತ್ತಿದ್ದು, ಸದರಿ ಜಲಾಶಯದಿಂದ ನೀರನ್ನು ವನ್ಯ ಮೃಗಗಳು, ಪಶುಪಕ್ಷಿಗಳು ಹಾಗೂ ನೀರಾವರಿಗೆ ಉಪಯೋಗಿಸುವ ಮೊದಲು, ನೀರನ್ನು ಶುದ್ಧೀಕರಿಸುವುದು ಅಗತ್ಯವಿದೆಯೆಂದು ತಿಳಿಸಿರುತ್ತಾರೆ. (ಗುಣ ಪರೀಕ್ಷೆ ವರದಿ ಆದಾರದಂತೆ) ಸದರಿ ನೀರನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಸಂಸ್ಕರಿಸಿ ಬಿಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

ಮುಂದುವರಿದಂತೆ ವೃಷಭಾವತಿ ಕಣಿವೆ ಮೂಲಕ ಬೈರಮಂಗಲ ಕೆರೆಯು ಕಲುಷಿತವಾಗಿರುವ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ರಾಷ್ಟ್ರೀಯ ವಿದ್ಯಾಲಯ-ತಾಂತ್ರಿಕ ಕಾಲೇಜಿನಿಂದ ಅಧ್ಯಯನ ನಡೆಸಿ ವರದಿಯನ್ನು ಪಡೆಯಲಾಗಿದೆ. ಈ ವರದಿಯ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಹಾಗೂ ಹೊರವಲಯದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರು ವೃಷಭಾವತಿ ಕಣಿವೆಯ ಎಡ ಹಾಗೂ ಬಲಭಾಗಗಳಿಂದ ನೇರವಾಗಿ ಸೇರಿ ಬೈರಮಂಗಲ ಕೆರೆ ಕಲುಷಿತವಾಗಿರುವುದು ಗಮನಿಸಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಟ್ಟ ರಾಜರಾಜೇಶ್ವರಿ ನಗರ ಮತ್ತು ಕೆಂಗೇರಿಗಳಿಂದ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರನ್ನು ಕ್ರೋಡೀಕರಿಸುವ ಸಲುವಾಗಿ ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಜಿ.ಎನ್.ಎನ್.ಯು.ಆರ್.ಎಂ. ಮತ್ತು ವಿಶ್ವ ಬ್ಯಾಂಕ್ ಸಹಭಾಗಿತ್ವದ ಆರ್ಥಿಕ ನೆರವಿನೊಂದಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗುವುದು ಈ ಪ್ರದೇಶಗಳಿಂದ ಹೊರಹೊಮ್ಮುವ ತ್ಯಾಜ್ಯ ನೀರನ್ನು ಸಂಸ್ಕರಣಾ ಘಟಕಗಳಿಗೆ ಸಾಗಿಸಿ ಸಂಸ್ಕರಿಸಲಾಗುವುದು. ಹಾಗೂ ಈ ಸಂಸ್ಕರಣಾ

ಘಟಕಗಳನ್ನು ಕಾವೇರಿ 4ನೇ ಹಂತ, 2ನೇ ಘಟ್ಟದ ಯೋಜನೆಯಲ್ಲಿ ತೆಗೆದು ಕೊಳ್ಳಲಾಗಿದೆ. ಇದರ ಜೊತೆ ಪರಿಸರ ಕ್ರಿಯಾ ಯೋಜನೆ–ಬಿ ಯೋಜನೆ ಅಡಿಯಲ್ಲಿ ನಗರದ ವೃಷಭಾವತಿ ಕಣಿವೆಯ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀವನ ಕೆಲಸಗಳನ್ನು ರೂ.50.00 ಕೋಟಿ ಮೊತ್ತದಲ್ಲಿ ಸಹ ತೆಗೆದುಕೊಳ್ಳಲಾಗುತ್ತಿದೆ.

ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳನ್ನು 3 ವರ್ಷ ಅವಧಿಯಲ್ಲಿ ಅಂದರೆ 2013ರೊಳಗೆ ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, ತದನಂತರ ಭೈರಮಂಗಲ ಕೆರೆಗೆ ತ್ಯಾಜ್ಯ ನೀರನ್ನು ಸೇರುವುದನ್ನು ತಡೆಗಟ್ಟಬಹುದು.

ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹ

583 (1063) ಶ್ರೀ ಬಸವರಾಜ್ ಪಾಟೀಲ ಅಟ್ಟೂರ (ಬಸವ ಕಲ್ಯಾಣ) : ಮಾನ್ಯ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕ್ರೀಡೆಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ಸರ್ಕಾರದ ಮುಂದಿರುವ ಕ್ರಮಗಳೇನು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಭಾಗದ ಕ್ರೀಡಾಪಟುಗಳಿಗೆ ಸರ್ಕಾರ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದೆ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಆ) ಜಿಲ್ಲೆಯಲ್ಲಿ ಈಗ ಇರುವ ಸ್ಟೇಡಿಯಂಗಳ ಸಂಖ್ಯೆ ಎಷ್ಟು? ಜಿಲ್ಲೆಯಲ್ಲಿ ಹೊಸದಾಗಿ ಯಾವ ಸ್ಥಳಗಳಲ್ಲಿ ಸ್ಟೇಡಿಯಂಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಎಷ್ಟು ಕ್ರೀಡಾ ಪಟುಗಳನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ (ಹೆಸರು ವಿವರಗಳನ್ನು ಒದಗಿಸುವುದು)?